# ಆಹಾ ಸುದ್ದಿ!

★ ಸಸಿತೋಟ

ಮೆಕ್ಸಿಕೋದಿಂದ ಅಮೆರಿಕಕ್ಕೆ ಮಾದಕ ದ್ರವ್ಯ ಸಾಗಣೆ ಮಾಡುವವರು ಕಂಡುಕೊಂಡ ವಿಚಿತ್ರವಾದ ಸಂಶೋಧನೆಗಳನ್ನು ಅಮೆರಿಕದ ಪೊಲೀಸರು ಇತ್ತೀಚೆಗೆ ಪ್ರದರ್ಶನಕ್ಕಿಟ್ಟಿದ್ದು, ವಾಹನದಲ್ಲಿ ಸೀಟೊಂದನ್ನು ಈ ತರಹ ಮಾರ್ಪಾಡಿಸಲಾಗಿತ್ತಂತೆ. ಸಂಶೋಧನೆ ಮಾಡುವವರು ವಿಜ್ಞಾನಿಗಳು, ತಂತ್ರಜ್ಞರು ಮಾತ್ರ ಅಲ್ಲ ಎಂದು ಪೊಲೀಸರಿಗೆ ಜ್ಞಾನೋದಯವಾಯ್ತಂತೆ.



ಜೈಪುರದಲ್ಲಿ ಆಶಿಶ್ ಮೀನಾ ಎಂಬಾತ ಸ್ಟಾರ್ಟ್‌ಅಪ್ ಆರಂಭಿಸಿ ಯಶಸ್ವಿಯೂ ಆಗಿದ್ದ. ಆದರೆ ಅದೃಷ್ಟ ಕೈಕೊಟ್ಟು ಈಗ ಪೊಲೀಸರ ಅತಿಥಿಯಾಗಿದ್ದಾನೆ, ಉದ್ಯೋಗಿಗಳ ಸಮೇತ. ಅಷ್ಟಕ್ಕೂ ಆತ ಆರಂಭಿಸಿದ್ದು ಕಳ್ಳತನ ಮಾಡುವ ದಂಧೆ. 5–6 ಮಂದಿ ಯುವಕರಿಗೆ ಮಾಸಿಕ ತಲಾ 15 ಸಾವಿರ ರೂಪಾಯಿ ವೇತನ ಕೊಟ್ಟು ಕಳ್ಳತನಕ್ಕೆ ನೇಮಕಾತಿ ಮಾಡಿಕೊಂಡಿದ್ದನಂತೆ. ನಿತ್ಯ ಇಂತಿಷ್ಟು ಮೊತ್ತದ ವಸ್ತುಗಳನ್ನು ಕಳವು ಮಾಡಲೇಬೇಕು ಎಂದು ಕೆಲಸದ ಗುರಿ ಕೂಡಾ ನಿಗದಿ ಮಾಡಿದ್ದನಂತೆ. ವಿಫಲವಾದರೆ ವೇತನದಲ್ಲಿ ಕಡಿತ.

ನ್ಯೂಯಾರ್ಕ್‌ನ ಬ್ರೂಕ್ಲಿನ್ ಪ್ರದೇಶದಲ್ಲಿ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಪುತ್ಥಳಿಯನ್ನು ಅಲ್ಲಲ್ಲಿ ಇಡಲಾಗಿದ್ದು 'ಮೂತ್ರ ಮಾಡಿ' ಎಂದು ಬರೆಯಲಾಗಿದೆಯಂತೆ. ಜಾಹೀರಾತು ಸಂಸ್ಥೆಯೊಂದರ ಮಾಲೀಕ ಗೇಬಲ್ ಎಂಬಾತ ಟ್ರಂಪ್ ಧೋರಣೆಯನ್ನು ವಿರೋಧಿಸಿ ಈ ಪುತ್ಥಳಿಗಳನ್ನು ಇರಿಸಿದ್ದಾನಂತೆ. ನಮ್ಮಲ್ಲಿ 'ಇಲ್ಲಿ ಮೂತ್ರ ಮಾಡಬೇಡಿ' ಎಂಬ ಫಲಕಕ್ಕೇ ಮೂತ್ರದ ಸ್ನಾನ ಮಾಡಿಸಿ ಹೋಗುವವರಿಗೆ ಇಂತಹದ್ದೊಂದು ಅವಕಾಶ ಸಿಕ್ಕಿದ್ದರೆ...!






ಮನೆಯ ಟ್ಯಾಪ್‌ನಲ್ಲಿ ನೀರಿನ ಬದಲು ಬಿಯರ್ ಬಂದರೆ.. ರಷ್ಯಾದ ಆ್ಯಂಡ್ರ್ಯೂ ಎಂಬಾತ ಈ ಕನಸನ್ನು ನನಸು ಮಾಡಿಕೊಂಡಿದ್ದಾನೆ. ಈತ ವಾಸಿಸುವ ಕಟ್ಟಡದ ಮೇಲಂತಸ್ತಿನಲ್ಲಿ ಬಿಯರ್ ತಯಾರಿಸುವ ಘಟಕವಿದೆಯಂತೆ. ಅದರ ಮಾಲೀಕ ಆ್ಯಂಡ್ರ್ಯೂ ಮನೆಗೆ ಕೊಳವೆ ಜೋಡಿಸಿ ಈ ವ್ಯವಸ್ಥೆ ಮಾಡಿಕೊಟ್ಟಿದ್ದಾನಂತೆ. ಮದ್ಯದಲ್ಲೇ ಕೈ ತೊಳೆಯುವುದು ಅಂದರೆ ಇದೇ ಇರಬಹುದು..

ಅಮೆರಿಕದ ಮಿಶಿಗನ್ ನಿವಾಸಿಯೊಬ್ಬ ಮನೆಯ ಮೆಟ್ಟಿಲಾಗಿ ಬಳಸುತ್ತಿದ್ದ ಈ ಕಲ್ಲಿಗೆ ಈಗ ಲಕ್ಷಾಂತರ ಡಾಲರ್ ಬೆಲೆಯಂತೆ. ಕಳೆದ 30 ವರ್ಷಗಳಿಂದಲೂ ಇದು ಆತನ ಪಾದಗಳಿಂದ ಲಕ್ಷಗಟ್ಟಲೆ ಸಲ ತುಳಿಸಿಕೊಂಡಿದ್ದು ಈಗ ಅದೃಷ್ಟದ ಕಲ್ಲಾಗಿ ಮಾರ್ಪಾಡಾಗಿದೆ. ಇದು ಉಲ್ಕೆಯಾಗಿದ್ದು, ಅಲ್ಲಿಯ ವಿಶ್ವವಿದ್ಯಾಲಯವು ಆಸಕ್ತಿ ತೋರಿಸಿದೆಯಂತೆ. ಅದೃಷ್ಟ ನಿಜಕ್ಕೂ ಒದ್ದುಕೊಂಡೇ ಬಂದಿದೆ.

ಶ್ರೀಲಂಕಾಗೆ ಮಧುಚಂದ್ರಕ್ಕೆಂದು ಬಂದಿದ್ದ ಲಂಡನ್ ದಂಪತಿ ತಾವು ಉಳಿದುಕೊಂಡಿದ್ದ ಹೋಟೆಲ್ ಅನ್ನೇ ಖರೀದಿಸಿ ಸಾಹಸ ಮೆರೆದಿದ್ದಾರೆ. ಆದರೆ ಈ ಸಾಹಸ ಮಾಡಿದಾಗ ಕಂಠಪೂರ್ತಿ ಕುಡಿದಿದ್ದರಂತೆ. ಸುಮಾರು ರೂ 29 ಲಕ್ಷಕ್ಕೆ ವ್ಯವಹಾರ ಕುದುರಿಸಿದಾಗಲೂ 10–12 ಗ್ಲಾಸ್ ರಮ್ ಏರಿಸಿದ್ದರಂತೆ. ಇದು ನಡೆದಿದ್ದು ಕಳೆದ ಜುಲೈನಲ್ಲಿ. ಈಗ ವಹಿವಾಟು ಜೋರಾಗಿ ನಡೆಯುತ್ತಿದೆಯಂತೆ. ಮುಂದೆ ಉದ್ಯಮ ವಿಸ್ತರಿಸುವ ಉದ್ದೇಶವೂ ಇದ್ದು ಅದನ್ನೂ ಮದ್ಯ ಸೇವಿಸಿದಾಗಲೇ ಮಾಡುತ್ತಾರಂತೆ. ಭಲೇ ಜೋಡಿಗೆ ಅದೃಷ್ಟ ತಂದಿದ್ದು ಮದ್ಯವಲ್ಲವೇ!

